COMPT/UPLOK/BGM/3318/2022/P.O./A.R.E.18

# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಜಿಎಂ/3318/2022
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ–18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 06/03/2023

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ:ಶ್ರೀ ಹನುಮಂತ ಯಲ್ಲಪ್ಪ ರುದ್ರಾಕ್ಷಿ, ಕಛೇರಿ ಅಧೀಕ್ಷಕರು, ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಗದಗ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

ಆರಕ್ಷಕ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆ, ಗದಗ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಶ್ರೀ ಮಂಜುನಾಥ ಮಲ್ಲಪ್ಪ ಸಜ್ಜನ, ವಿಳಾಸ: ಹೊಂಬಳ, ತಾಲ್ಲೂಕಾ ಜಿಲ್ಲೆ ಗದಗ, ಹಾಲಿ ವಾಸ: ಕೆಎಚ್‌ಬಿ ಕಾಲೋನಿ, ಕೋರ್ಟ್ ಹಿಂಭಾಗ, ಗದಗ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸರ್ಕಾರಿ/ಸಾರ್ವಜನಿಕ ನೌಕರರಾದ ಶ್ರೀ ಹನುಮಂತ ಯಲ್ಲಪ್ಪ ರುದ್ರಾಕ್ಷಿ, ಕಛೇರಿ ಅಧೀಕ್ಷಕರು, ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಗದಗ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು

ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ದೂರನ್ನು ದಾಖಲಿಸಿಕೊಂಡು, ತನಿಖೆಯನ್ನು ಕೈಗೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ಸಾರಾಂಶ:-** ದೂರುದಾರರ ಪತ್ನಿ ಶ್ರೀಮತಿ ವಿಜಯಲಕ್ಷ್ಮೀ ರವರ ಹೆಸರಿನಲ್ಲಿದ್ದ ಗದಗ ತಾಲ್ಲೂಕು ಹಿರೇಹಂದಿಗೋಳ ಗ್ರಾಮದ ರಿ.ಸ.ನಂ. 88/1ಎ+1ಬಿ+1ಸಿ, 06 ಎಕರೆ 30 ಗುಂಟೆ, ರಿ.ಸ.ನಂ.83/1+2, 13 ಎಕರೆ 25 ಗುಂಟೆ ಹೀಗೆ ಒಟ್ಟು 20 ಎಕರೆ 15 ಗುಂಟೆ ಜಮೀನಿನನ್ನು ಒಂದು ಎಕರೆಗೆ ರೂ.5 ಲಕ್ಷದಂತೆ ಅಂಬೇಡ್ಕರ ಅಭಿವೃದ್ಧಿ ನಿಗಮಕ್ಕೆ ಸನ್ 2017 ರಲ್ಲಿ ಮಾರಾಟ ಮಾಡಿದ್ದು, ಈ ವ್ಯವಹಾರದ ಉಸ್ತುವಾರಿಯನ್ನು ದೂರುದಾರರು ನೋಡಿಕೊಂಡಿರುತ್ತಾರೆ. ಈ ಮಾರಾಟದ ಒಟ್ಟು ಮೊತ್ತದಲ್ಲಿ ರೂ. 89 ಲಕ್ಷ ಹಣ ಮಂಜೂರಾಗಿ ಪಡೆದುಕೊಂಡಿದ್ದು, ಇನ್ನು ರೂ.12,57,500/- ಸಂದಾಯವಾಗುವುದು ಬಾಕಿ ಇರುತ್ತದೆ. ಈ ಮೊತ್ತವು ಅಂಬೇಡ್ಕರ ಅಭಿವೃದ್ಧಿ ನಿಗಮದಿಂದ ದಿ: 03-11-2020ರಂದು ಬಿಡುಗಡೆಯಾಗಿದ್ದು, ದೂರುದಾರರು ಗದಗ ಜಿಲ್ಲಾ ಕಛೇರಿಯಲ್ಲಿ ವಿಚಾರಿಸಿದಾಗ ಎದುರುದಾರರು ತಮ್ಮ ಕಛೇರಿಗೆ ಇನ್ನು ಆದೇಶ ಬಂದಿಲ್ಲ ಎಂದು ಹೇಳುತ್ತಾ ಬಂದಿರುತ್ತಾರೆ. ದೂರುದಾರರು ತಮ್ಮ ಬಳಿ ಇದ್ದ ಆದೇಶದ ಪ್ರತಿಯನ್ನು ಕೊಟ್ಟಿದ್ದು, ಒಟ್ಟು ಶೇಕಡಾ 20% ರಷ್ಟು ಹಣವನ್ನು ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡುವುದಾಗಿ ಹೇಳುತ್ತಾ ಬಂದಿದ್ದು, ಈವರೆಗೂ ಜಮಾ ಮಾಡಿರುವುದಿಲ್ಲ. ದಿ: 20-11-2020ರಂದು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ದೂರುದಾರರು ಗದಗ ಅಂಬೇಡ್ಕರ ಅಭಿವೃದ್ಧಿ ನಿಗಮದ ಕಛೇರಿಗೆ ಹೋದಾಗ, ಜಿಲ್ಲಾ ವ್ಯವಸ್ಥಾಪಕರಾದ ಎದುರುದಾರರು ಕಛೇರಿಯಲ್ಲಿ ಇಲ್ಲದ ಕಾರಣ ದಿ: 21-11-2020 ರಂದು ಪುನಃ ಭೇಟಿಯಾಗಲು ಎದುರುದಾರರ ಕಛೇರಿಗೆ ಹೋದಾಗ ಎದುರುದಾರರು ಮೀಂಟಿಗಿಗೆ ಹೋಗಿದ್ದು, ನಂತರ ಸಂಜೆ 5.45 ಗಂಟೆ ಸುಮಾರಿಗೆ ಹುಡ್ಕೋ 3ನೇ ಕ್ರಾಸ್ ಹತ್ತಿರ ಎದುರುದಾರರಿಗೆ ಭೇಟಿಯಾಗಿ ದೂರುದಾರರು ಎದುರುದಾರರನ್ನು ಮಾತನಾಡಿದಾಗ ಚೆಕ್ ಬಿಡುಗಡೆ ಮಾಡಲು ರೂ. 40,000/- ಲಂಚ ಕೊಡುವಂತೆ ಹೇಳಿ ಎದುರುದಾರರು ಅವರ ಡ್ರೈವರ್‌ಗೆ ಕರೆದು ದೂರುದಾರರನ್ನು ತೋರಿಸಿ ಹಣವನ್ನು ಡ್ರೈವರ್ ಕೈಯಲ್ಲಿ ಕೊಡುವಂತೆ ಹೇಳಿರುತ್ತಾರೆ. ಎದುರುದಾರರು ದೂರುದಾರರೊಂದಿಗೆ ಮಾಡಿದ

ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

3. ದೂರುದಾರರ ಪತ್ನಿ ಹೆಸರಿನಲ್ಲಿದ್ದ ಜಮೀನನ್ನು ಅಂಬೇಡ್ಕರ ಅಭಿವೃದ್ಧಿ ನಿಗಮಕ್ಕೆ ಮಾರಾಟ ಮಾಡಿದ್ದರಲ್ಲಿ ಸಂದಾಯವಾಗಬೇಕಾದ ಬಾಕಿ ಹಣ ರೂ. 12,57,500/- ಗಳ ಚೆಕ್ ಬಿಡುಗಡೆ ಮಾಡಲು ಅಂಬೇಡ್ಕರ್ ಅಭಿವೃದ್ಧಿ ನಿಗಮ ಗದಗ ಕಛೇರಿಯ ವ್ಯವಸ್ಥಾಪಕರಾದ ಎದುರುದಾರರು ರೂ. 40,000/- ಗಳ ಲಂಚ ಕೇಳುತ್ತಿದ್ದ ಕಾರಣ ಎದುರುದಾರರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಕೋರಿ ತನಗೆ ಕನ್ನಡ ಓದಲು ಬರುತ್ತಿದ್ದು ಬರೆಯಲು ಬಾರದಿರುವ ಕಾರಣ ಈ ದೂರನ್ನು ತನ್ನ ಸ್ನೇಹಿತನಾದ ಶ್ರೀ ರಿಯಾಜ್ ಇಬ್ರಾಹಿಂಪೂರ ಇವರಿಂದ ಬರೆಯಿಸಿ ಸರ್ಕಾರಿ ನೌಕರರುರಾದ ಎದುರುದಾರರ ಮೇಲೆ ಕಾನೂನು ಕ್ರಮ ಜರುಗಿಸಲು ದೂರುದಾರರು ದಿ:23-11-2020 ರಂದು ಬೆಳ್ಳಿಗೆ 10.45 ಗಂಟೆಗೆ ಗದಗ ಭ್ರಷ್ಟಾಚಾರ ನಿಗ್ರಹ ಠಾಣೆಗೆ ಹಾಜರಾಗಿ ನೀಡಿದ ದೂರಿನನ್ವಯ ಠಾಣಾ ಗುನ್ನಾ ನಂ. 16/2020 ರ ಕಲಂ 7 (ಎ) ಪಿಸಿ ಕಾಯ್ದೆ 1988 ರ ಪ್ರಕಾರ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಉಮೇಶ ಮಲ್ಲಪ್ಪ ಗದಗ ಮತ್ತು ಶ್ರೀ ಬಸಣ್ಣಗೌಡ ಶೇಖರಗೌಡ ದೇಸಾಯಿಗೌಡ್ರ ಇವರನ್ನು ಬರಮಾಡಿಕೊಂಡು ಅವರುಗಳ ಪರಿಚಯ ಮಾಡಿಸಿ, ದೂರುದಾರರ ಹಾಗೂ ದೂರುದಾರರ ಸ್ನೇಹಿತನಾದ ಶ್ರೀ ರಿಯಾಜ್ ಇಬ್ರಾಹಿಂಪೂರ ರವರಿಗೂ ಸಹ ಪರಿಚಯ ಮಾಡಿಸಿ ದೂರುದಾರರು ನೀಡಿದ್ದ ದೂರಿನ ಪ್ರತಿಯನ್ನು ಹಾಗೂ ಪ್ರಥಮ ವರ್ತಮಾನ ವರದಿಯನ್ನ ಪಂಚರಿಗೆ ತೋರಿಸಿ ದೂರುದಾರರು ಇಂಗ್ಲೀಷ್ ಮಾಧ್ಯಮದಲ್ಲಿ ಅಭ್ಯಾಸ ಮಾಡಿದ್ದರಿಂದ ಕನ್ನಡ ಓದಲು ಬರುತ್ತಿದ್ದು ಬರೆಯಲು ಬಾರದ ಕಾರಣ ತಮ್ಮ ದೂರನ್ನು ತಮ್ಮ ಸ್ನೇಹಿತನಾದ ಶ್ರೀ ರಿಯಾಜ್ ಇಬ್ರಾಹಿಂಪೂರ ಇವರಿಂದ ಬರೆಯಿಸಿಕೊಟ್ಟಿರುತ್ತಾರೆಂದು ತಿಳಿಸಿ ದೂರುದಾರರ ಸ್ನೇಹಿತನಾದ ಶ್ರೀ ರಿಯಾಜ್ ಇಬ್ರಾಹಿಂಪೂರ ಇವರಿಗೆ ಹೊರಗೆ ಕೂಡ್ರುವಂತೆ ಕಳುಹಿಸಿ ದೂರುದಾರರ ದೂರನ್ನು ಓದಿ ಹೇಳಿರುತ್ತಾರೆ. ಪಂಚರು ದೂರುದಾರರ ದೂರನ್ನು ಬರೆದುಕೊಟ್ಟಿರುವ ಬಗ್ಗೆ ಶ್ರೀ ರಿಯಾಜ್ ಇಬ್ರಾಹಿಂಪೂರ್

ಇವರಿಗೆ ಕೇಳಿದಾಗ ಅವರು ದೂರುದಾರರು ಹೇಳಿದಂತೆ ದೂರನ್ನು ಬರೆದುಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಪಂಚರು ದೂರಿನ ವಿಷಯದ ಬಗ್ಗೆ ದೂರುದಾರರಿಗೆ ವಿಚಾರಿಸಿದಾಗ ಅವರು ದೂರಿನಲ್ಲಿ ಬರೆದ ವಿಷಯವನ್ನು ತಿಳಿಸಿರುತ್ತಾರೆ.

5. ತನಿಖಾಧಿಕಾರಿಯವರು ಎದುರುದಾರರು ಬೇಡಿಕೆಯಿಟ್ಟಿರುವ ಲಂಚದ ಹಣವಾದ ರೂ.40,000/- ಗಳನ್ನು ಹಾಜರಪಡಿಸಲು ಸೂಚಿಸಿದಂತೆ ದೂರುದಾರರು ತಮ್ಮ ಶರ್ಟ್ ಜೇಬಿನಿಂದ ರೂ.2,000/- ಮುಖಬೆಲೆಯ 15 ನೋಟುಗಳನ್ನು ಹಾಗೂ ರೂ. 500/- ಮುಖಬೆಲೆಯ 20 ನೋಟುಗಳನ್ನು ತೆಗೆದು ತನಿಖಾಧಿಕಾರಿಯವರ ಮುಂದಿನ ಟೇಬಲ್ ಮೇಲೆ ಹಾಜರಪಡಿಸಿರುತ್ತಾರೆ. ಪಂಚ-2 ರವರಾದ ಬಿ.ಎಸ್.ದೇಸಾಯಿಗೌಡ್ರ ಹೇಳಿದಂತೆ ಪಂಚ-1 ರವರಾದ ಯು.ಎಂ.ಗದಗ ರವರು ಸದರಿ ನೋಟುಗಳ ಮೌಲ್ಯ ಮತ್ತು ನಂಬರಗಳನ್ನು ಒಂದು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ.

6. ತನಿಖಾಧಿಕಾರಿಯವರು ಸದರಿ ನೋಟುಗಳಿಗೆ ತೆಳುವಾಗಿ ಫಿನಾಫ್ತಲಿನ್ ಪುಡಿಯ ಲೇಪನವನ್ನು ತಮ್ಮ ಸಿಬ್ಬಂದಿಯವರ ಮುಖಾಂತರ ಮಾಡಿಸಿ ತಮ್ಮ ಸಿಬ್ಬಂದಿಯವರ ಮುಖಾಂತರ ಒಂದು ಬಟ್ಟಲಿಗೆ ಡಿಸ್ಟಿಲ್ ವಾಟರ್‌ನ್ನು ಹಾಕಿ ಅದಕ್ಕೆ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಮಿಶ್ರಣ ಮಾಡಿ ದ್ರಾವಣವನ್ನು ತಯಾರಿಸಿರುತ್ತಾರೆ.

7. ಪಂಚ-2 ರವರು ದೂರುದಾರರ ಅಂಗಶೋಧನೆ ಮಾಡಿದಾಗ ದೂರುದಾರರು ಶರ್ಟ್ ಹಾಗೂ ಪ್ಯಾಂಟನ್ನು ಧರಿಸಿದ್ದು, ಶರ್ಟಿನ ಜೇಬು ಖಾಲಿಯಿದ್ದು, ದೂರುದಾರರ ಪ್ಯಾಂಟನ್ನು ಪರಿಶೀಲನೆ ಮಾಡಿದಾಗ ಪ್ಯಾಂಟಿನ ಮುಂದಿನ ಬಲಭಾಗದ ಜೇಬಿನಲ್ಲಿ ಕರ್ಚಿಪ್ ಹಾಗೂ ಈ ಪ್ರಕರಣದ ಎಫ್‌ಐಆರ್ ಪ್ರತಿ ಮತ್ತು ಎಡಭಾಗದ ಜೇಬಿನಲ್ಲಿ ಮೊಬೈಲ್ ಇದ್ದು, ಹಿಂದಿನ ಜೇಬಿನಲ್ಲಿ ಚಿಲ್ಲರೆ ಹಣ ಮತ್ತು ನೋಟುಗಳು ಇರುತ್ತವೆ.

8. ಪಂಚ-2 ರವರು ತಯಾರಿಸಿಟ್ಟಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತಮ್ಮ ಕೈಗಳನ್ನು ಅದ್ದಿ ತೊಳೆದುಕೊಂಡಾಗ ಸೋಡಿಯಂ ಕಾರ್ಬೋನೇಟ್ ದ್ರಾವಣದ ಬಣ್ಣ ಬದಲಾಗಿರುವುದಿಲ್ಲ. ನಂತರ ಕೈಗಳನ್ನು ಕೈವಸ್ತ್ರದಿಂದ ಒರೆಸಿಕೊಂಡು ಟೇಬಲ್ ಮೇಲೆ ಇದ್ದ ಫಿನಾಫ್ತಲಿನ್ ಪುಡಿ ಸವರಿದ್ದ ನೋಟುಗಳನ್ನು ತೆಗೆದುಕೊಂಡು ಎಣಿಸಿ

ದೂರುದಾರರು ಧರಿಸಿದ್ದ ಶರ್ಟಿನ ಜೇಬಿನಲ್ಲಿ ನೋಟುಗಳನ್ನು ಇಟ್ಟು ತಮ್ಮ ಎರಡು ಹಸ್ತದ ಕೈಬೆರಳುಗಳನ್ನು ತಯಾರಿಸಿಟ್ಟಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದುಕೊಂಡಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಸದರಿ ದ್ರಾವಣವನ್ನು ತನಿಖೆಗಾಗಿ ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡಿರುತ್ತಾರೆ.

9. ಎದುರುದಾರರು ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟಿರುವುದನ್ನು ದೂರುದಾರರು ತಮ್ಮ ಸ್ಯಾಮಸಂಗ್ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದನ್ನು ತನಿಖಾಧಿಕಾರಿಯವರು ದೂರುದಾರರ ಕಡೆಯಿಂದ ಹಾಜರುಪಡಿಸಿಕೊಂಡು ದೂರುದಾರರು ತೋರಿಸಿದಂತೆ ಅದರಲ್ಲಿ ದಿ: 21-11-2020 ರಂದು ರೆಕಾರ್ಡ್ ಆದ ಲಂಚದ ಬೇಡಿಕೆಯ ಸಂಭಾಷಣೆಗಳ ಭಾಗವನ್ನು ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರಿಂದ ಲ್ಯಾಪ್‌ಟಾಪ್‌ಗೆ ವರ್ಗಾಯಿಸಿಕೊಂಡು ದೂರುದಾರರ ಮೊಬೈಲ್‌ನ್ನು ಅವರಿಗೆ ಮರಳಿಸಿರುತ್ತಾರೆ. ಲ್ಯಾಪ್‌ಟಾಪ್‌ನಲ್ಲಿ ಸಂಗ್ರಹವಾದ ಸಂಭಾಷಣೆಯನ್ನು ತನಿಖಾಧಿಕಾರಿಯವರು ಪಂಚರಿಗೆ ಕೇಳಿಸಿ ಸದರಿ ಸಂಭಾಷಣೆ ಭಾಗವನ್ನು ಲ್ಯಾಪಟಾಪ್‌ದಿಂದ ಸಿಡಿಗೆ ಕಾಪಿ ಮಾಡಿಕೊಂಡು ಅಮಾನತ್ತುಪಡಿಸಿಕೊಂಡಿರುತ್ತೇನೆ.

10. ತನಿಖಾಧಿಕಾರಿಯವರು ದೂರುದಾರರನ್ನು ಎದುರುದಾರರ ಕಛೇರಿಗೆ ಕಳುಹಿಸಿಕೊಟ್ಟು ಅಲ್ಲಿ ಎದುರುದಾರರು ಮಿಟಿಂಗ್ ಮುಗಿಸಿಕೊಂಡು ಬಂದಿರುವ ಬಗ್ಗೆ ತಿಳಿದುಕೊಂಡು ಎದುರುದಾರರು ಅವರ ಕಛೇರಿಯಲ್ಲಿ ಹಾಜರಿದ್ದಲ್ಲಿ ಎದುರುದಾರರಿಗೆ ಚೆಕ್ ಬ್ಯಾಂಕ್ ಕಳುಹಿಸುವ ಬಗ್ಗೆ ವಿಚಾರಿಸಿ ಎದುರುದಾರರು ಲಂಚದ ಹಣವನ್ನು ಕೇಳಿದ್ದಲ್ಲಿ ಎದುರುದಾರರಿಗೆ ಲಂಚದ ಹಣ ಕೊಡಲು ಮತ್ತು ಎದುರುದಾರರು ಮಿಟಿಂಗ್‌ನಲ್ಲಿ ಇದ್ದಲ್ಲಿ ಅವರ ಡ್ರೈವರ್‌ಗೆ ಭೇಟಿಯಾಗಿ ಅವರಿಗೆ ಲಂಚದ ಹಣ ಕೊಟ್ಟು ಎಲ್ಲಿಟ್ಟುಕೊಳ್ಳುತ್ತಾರೆಂಬುದನ್ನು ಗಮನಿಸಿ ಕೇಳಿದಾಗ ತಿಳಿಸಬೇಕು ಮತ್ತು ಅವರು ಹಣವನ್ನು ಪಡೆದುಕೊಂಡ ನಂತರ ತಮ್ಮ ಕೈವಸ್ತ್ರದಿಂದ ಮುಖ ಒರೆಸಿಕೊಳ್ಳುವುದರ ಮೂಲಕ ಸನ್ನೆ ಮಾಡುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ತಮ್ಮ ಇಲಾಖೆಯ ವಾಯ್ಸ್ ರೆಕಾರ್ಡ್‌ರನ್ನು ನೀಡಿ ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿಕೊಟ್ಟು ಎದುರುದಾರರಿಗೆ ಹಣಕೊಡಲು ಹೋದಾಗ ವಾಯ್ಸ್ ರೆಕಾರ್ಡ್‌ರನ್ನು ಆನ್

ಮಾಡಿಕೊಂಡು ಹೋಗಿ, ಹಣ ಕೊಡುವ ಸಮಯದಲ್ಲಿ ಜರುಗುವ ಸಂಭಾಷಣೆಯನ್ನು ರೆಕಾರ್ಡ್ ಮಾಡುವಂತೆ ತಿಳಿಸಿರುತ್ತಾರೆ. ಪಂಚ-1 ರವರಿಗೆ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಿ ಅಲ್ಲಿ ಜರುಗುವ ಘಟನೆಗಳನ್ನು ಗಮನಿಸಿ ಕೇಳಿದಾಗ ಹೇಳುವಂತೆ ಹಾಗೂ ಪಂಚ-2 ರವರಿಗೆ ತಮ್ಮ ಜೊತೆಯಲ್ಲಿರುವಂತೆ ತನಿಖಾಧಿಕಾರಿಯವರು ತಿಳಿಸಿ ಉಳಿದ ಎಸಿಬಿ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆಯನ್ನು ನೀಡಿರುತ್ತಾರೆ. ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ತನಿಖಾಧಿಕಾರಿಯವರು ಕೆಲವು ಪೋಟೋಗಳನ್ನು ಇಲಾಖೆಯ ಡಿಜಿಟಲ್ ಕ್ಯಾಮೆರಾದಿಂದ ತಮ್ಮ ಸಿಬ್ಬಂದಿಯವರ ಮುಖಾಂತರ ತೆಗೆಯಿಸಿರುತ್ತಾರೆ. ಸದರಿ ಪ್ರಾಯೋಗಿಕ ಪಂಚನಾಮೆಯನ್ನು ಭ್ರಷ್ಟಾಚಾರ ನಿಗ್ರಹ ಠಾಣೆ, ಗದಗ ಕಛೇರಿಯಲ್ಲಿ ದಿ: 23-11-2020 ರಂದು ಮುಂಜಾನೆ 11.45 ಗಂಟೆಯಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಜರುಗಿಸಿ ಪಂಚನಾಮೆಯ ನಡವಳಿಯನ್ನು ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರಿಂದ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

11. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ತನಿಖಾಧಿಕಾರಿಯವರು ದೂರುದಾರರಿಗೆ, ಪಂಚರಿಗೆ ಹಾಗೂ ಎಸಿಬಿ ಸಿಬ್ಬಂದಿಯವರಿಗೆ ಸರ್ಕಾರಿ ವಾಹನದಲ್ಲಿ ಕರೆದುಕೊಂಡು ಎಸಿಬಿ ಕಛೇರಿಯಿಂದ ಮಧ್ಯಾಹ್ನ 12.45 ಗಂಟೆಗೆ ಗದಗ ಜಿಲ್ಲಾಡಳಿತ ಭವನಕ್ಕೆ ಮುಳಗುಂದ ನಾಕಾ ಕೋರ್ಟ್ ಸರ್ಕಲ್ ದಾಟಿ ಜಿಲ್ಲಾಡಳಿತ ಭವನಕ್ಕೆ ಪ್ರವೇಶಿಸಿ, ಪೂರ್ವ ವಿಭಾಗದಲ್ಲಿ ವಾಹನಗಳ ಪಾರ್ಕಿಂಗ್ ಸ್ಥಳಕ್ಕೆ ಹೋಗಿ ತನಿಖಾಧಿಕಾರಿಯವರು ವಾಹನವನ್ನು ನಿಲ್ಲಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರ ಬಳಿ ಇದ್ದ ವಾಯ್ಸ್ ರೆಕಾರ್ಡ್‌ರ ಆನ್ ಮಾಡಿ ಎದುರುದಾರರ ವಾಹನ ಚಾಲಕನಿಗೆ ಭೇಟಿಯಾಗಲು ಕಳುಹಿಸಿರುತ್ತಾರೆ ಹಾಗೂ ಪಂಚ-1 ರವರಿಗೆ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಲು ತಿಳಿಸಿದಂತೆ ಪಂಚ-1 ರವರು ದೂರುದಾರರನ್ನು ಹಿಂಬಾಲಿಸಿಕೊಂಡು ಹಲವಾರು ಜನ ಡ್ರೈವರ್‌ಗಳು ನಿಂತಿದ್ದ ಸ್ಥಳಕ್ಕೆ ಹೋದಾಗ ದೂರುದಾರರು ಅವರಲ್ಲಿ ಡ್ರೈವರ್ ಫಕ್ಕೀರಪ್ಪ ಪೂಜಾರವರನ್ನು ನೋಡಿ ಕೂಗಿ ಕರೆದಾಗ ಪೂಜಾರವರು ಬಂದಿದ್ದು, ಅವರಿಗೆ

ದೂರುದಾರರು ತಮ್ಮ ಶರ್ಟ್ ಜೇಬಿನಿಂದ ಲಂಚದ ಹಣ ತೆಗೆದು ಕೊಡಲು ಹೋದಾಗ ಪೂಜಾರರವರು ದೂರುದಾರರನ್ನು ಅಲ್ಲಿಯೇ ಹತ್ತಿರ ಇದ್ದ ಬೇವಿನಕಟ್ಟಿ ಕೊಲ್ಡ್ರಿಂಕ್ಸ್ ಅಂಗಡಿಯ ಒಳಗೆ ಕರೆದುಕೊಂಡು ಹೋಗಿ ಕುಳಿತು ಮಾತನಾಡಿ ಕೊಲ್ಡ್ರಿಂಕ್ಸ್ ಅಂಗಡಿ ನಡೆಸುವ ಪ್ರತೀಕ ಬೇವಿನಕಟ್ಟಿ ಇವರ ಕಡೆಗೆ ಲಂಚದ ಹಣವನ್ನು ಕೊಡಲು ತಿಳಿಸಿದಂತೆ ದೂರುದಾರರು ತಮ್ಮ ಶರ್ಟ್ ಜೇಬಿನಿಂದ ಲಂಚದ ಹಣವನ್ನು ತೆಗೆದು ಪ್ರತೀಕ ರವರಿಗೆ ಕೊಟ್ಟಾಗ ಅವರು ಆ ಹಣವನ್ನು ತಮ್ಮ ಎಡಗೈನಿಂದ ಪಡೆದು, ತಮ್ಮ ಕೊಲ್ಡ್ರಿಂಕ್ಸ್ ಸೆಂಟರಿನ ಟೇಬಲ್‌ನಲ್ಲಿಯ ಕ್ಯಾಶ್ ಡ್ರಾದಲ್ಲಿ ಇಟ್ಟಿಕೊಂಡಿರುತ್ತಾರೆ. ಆಗ ದೂರುದಾರರು ಕೊಲ್ಡ್ರಿಂಕ್ಸ್ ಅಂಗಡಿಯಿಂದ ಹೊರಗಡೆ ಬಂದು ಕಾಂಪ್ಲೆಕ್ಸ್ ಮೆಟ್ಟಿಲಿನ ಹತ್ತಿರ ನಿಂತು ತಮ್ಮ ಕೈವಸ್ತ್ರದಿಂದ ಮುಖ ಒರೆಸಿಕೊಳ್ಳುವುದರ ಮೂಲಕ ಸಂಜ್ಞೆ ಮಾಡಿರುತ್ತಾರೆ. ಪಂಚ-1 ರವರು ಈ ವಿದ್ಯಮಾನವನ್ನು ಜ್ಯೂಸ್ ಅಂಗಡಿಯ ಮುಂದಿನ ಪ್ಯಾಸೆಜ್‌ನಲ್ಲಿ ನಿಂತು ನೋಡಿರುತ್ತಾರೆ. ಆಗ ವಾಹನ ಪಾಕಿಂರ್ಗ ಸ್ಥಳದಲ್ಲಿ ಅಲ್ಲಲ್ಲಿ ವಾಚ್ ಮಾಡುತ್ತ ನಿಂತಿದ್ದ ತನಿಖಾಧಿಕಾರಿಯವರು ಹಾಗೂ ಅವರ ಸಿಬ್ಬಂದಿಯವರು ದೂರುದಾರರ ಬಳಿ ಬಂದಾಗ ಅವರು ತಮ್ಮ ಹತ್ತಿರ ನಿಂತಿದ್ದ ಫಕ್ಕೀರಪ್ಪ ಪೂಜಾರರವರಿಗೆ ತೋರಿಸಿ ಇವರೇ ಎದುರುದಾರರ ಡ್ರೈವರ್‌ರಾಗಿರುತ್ತಾರೆ. ಮತ್ತು ಇವರಿಗೆ ಲಂಚದ ಹಣವನ್ನು ಕೊಡಲು ಹೋದಾಗ ಇವರು ಕೊಲ್ಡ್ರಿಂಕ್ಸ್ ಅಂಗಡಿಯ ಪ್ರತೀಕ ಇವರ ಕಡೆಗೆ ಕೊಡಿಸಿರುತ್ತಾರೆ ಎಂದು ಹೇಳಿದಾಗ ಮಧ್ಯಾಹ್ನ 1-20 ಗಂಟೆಯಾಗಿರುತ್ತದೆ.

12. ತನಿಖಾಧಿಕಾರಿಯವರು ಶ್ರೀ ಫಕ್ಕೀರಪ್ಪ ಪೂಜಾರರವರಿಗೆ ಮತ್ತು ಪ್ರತೀಕ ಇವರಿಗೆ ದೂರುದಾರರು ನೀಡಿದ ದೂರಿನಂತೆ ಎದುರುದಾರರ ವಿರುದ್ದ ಎಸಿಬಿ ಗದಗದಲ್ಲಿ ಲಂಚ ಪ್ರತಿಬಂಧಕ ಕಾಯ್ದೆ ಅಡಿ ಪ್ರಕರಣ ದಾಖಲಾಗಿರುವ ಬಗ್ಗೆ ತಿಳಿಸಿ, ತನಿಖೆಗೆ ಸಹಕರಿಸಲು ಹೇಳಿ ತಮ್ಮ, ಪಂಚರ ಹಾಗೂ ಎಸಿಬಿ ಸಿಬ್ಬಂದಿಯವರ ಪರಿಚಯ ಮಾಡಿಸಿ ದೂರುದಾರರಿಂದ ಪಡೆದ ಲಂಚದ ಹಣ ಎಲ್ಲಿರುತ್ತದೆ ಎಂದು ಕೇಳಿದಾಗ ಅವರು ತಮ್ಮ ಕ್ಯಾಶ್ ಡ್ರಾದಲ್ಲಿ ಇಟ್ಟಿರುವುದಾಗಿ ತಿಳಿಸಿರುತ್ತಾರೆ. ಆಗ ತನಿಖಾಧಿಕಾರಿಯವರು ಅವರಿಗೆ ದೂರುದಾರರಿಂದ ಹಣ ಏಕೆ ಪಡೆದುಕೊಂಡಿರುವೆ ಎಂದು ಕೇಳಿದಾಗ ಡ್ರೈವರ್ ಫಕ್ಕೀರಪ್ಪರವರು ದೂರುದಾರರಿಂದ ಹಣ ಪಡೆದುಕೊಂಡು ಇಟ್ಟುಕೊ ಆಮೇಲೆ ನಾನು

ಅಥವಾ ನಮ್ಮ ಸಾಹೇಬರು ಬಂದು ಇಸಿದುಕೊಳ್ಳುತ್ತೇವೆಂದು ಹೇಳಿದ್ದು, ಆಗಾಗ ಈ ರೀತಿ ಬೇರೆಯವರಿಂದ ಹಣ ಪಡೆದುಕೊಂಡು ಇಟ್ಟುಕೊಳ್ಳಲು ತಿಳಿಸುತ್ತಿದ್ದರು ಎಂದು ಹೇಳಿರುತ್ತಾರೆ.

13. ತನಿಖಾಧಿಕಾರಿಯವರು ಪ್ರತೀಕರವರ ಹೆಸರು ವಿಳಾಸವನ್ನು ಕೇಳಿ ತಿಳಿದುಕೊಂಡಿರುತ್ತಾರೆ. ಅದೇ ರೀತಿ ಎದುರುದಾರರ ಡ್ರೈವರ್ ಆದ ಫಕ್ಕೀರಪ್ಪ ಪೂಜಾರ ಇವರ ಹೆಸರು ವಿಳಾಸ ಕೇಳಿ ತಿಳಿದುಕೊಂಡಾಗ ಅವರು ತಾನು ಪ್ರಸಾದ ಸೆಕ್ಯೂರಿಟಿ ಏಜೆನ್ಸಿ, ರಂಗನವಾಡ ಗದಗ ಇವರಿಂದ ಬಾಹ್ಯ ಗುತ್ತಿಗೆ ಆಧಾರದ ಮೇಲೆ ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ 2015ನೇ ಸಾಲಿನಿಂದ ವಾಹನ ಚಾಲಕನಾಗಿ ಕೆಲಸ ಮಾಡುತ್ತಿರುವುದಾಗಿ ನಿಗಮದಿಂದ ಬಾಡಿಗೆ ಆಧಾರದ ಮೇಲೆ ಪಡೆದ ಶ್ರೀ ಶಿವರಾಜ ಯಳವತ್ತಿ ಸಾ॥ ಬೆಟಗೇರಿ ಇವರಿಗೆ ಸೇರಿದ ವಾಹನದ ಚಾಲಕನಾಗಿರುತ್ತೇನೆ ತಿಳಿಸಿರುತ್ತಾರೆ.

14. ತನಿಖಾಧಿಕಾರಿಯವರು ಬೇವಿನಕಟ್ಟಿ ಕೊಲ್ಡ್ರಿಂಕ್ಸ್ ಅಂಗಡಿಯಲ್ಲಿ ಗಿರಾಕಿಗಳಿಗೆ ಸರ್ವ್ ಮಾಡುವ ಟೇಬಲ್ ಮೇಲೆ ಸಿಬ್ಬಂದಿಯವರ ಮುಖಾಂತರ ಏಳು ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದ ನಂತರ ತನಿಖಾಧಿಕಾರಿಯವರು ಸೂಚಿಸಿದಂತೆ ಪ್ರತೀಕ ಬೇವಿನಕಟ್ಟಿ ತಮ್ಮ ಕೈಗಳನ್ನು ತಯಾರಿಸುತ್ತಿದ್ದ ಎರಡು ಸೋಡಿಯಂ ಕಾರ್ಬೋನೇಟ್ ದ್ರಾವಣದ ಬಟ್ಟಲುಗಳಲ್ಲಿ ಪ್ರತ್ಯೇಕವಾಗಿ ಅದ್ದಿ ತೊಳೆದುಕೊಂಡಾಗ ಅವರ ಬಲಗೈ ತೊಳೆದ ದ್ರಾವಣದ ಬಣ್ಣ ಬದಲಾಗಿರುವುದಿಲ್ಲ. ಎಡಗೈ ತೊಳೆದ ದ್ರಾವಣದ ಬಣ್ಣ ಅತಿ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿರುತ್ತದೆ. ತನಿಖಾಧಿಕಾರಿಯವರು ಶ್ರೀ  ಪ್ರತೀಕ ಬೇವಿನಕಟ್ಟಿರವರ ಎಡಗೈ ತೊಳೆದ ದ್ರಾವಣದ ಬಣ್ಣ ಮಾತ್ರ ಬದಲಾವಣೆಯಾದ ಬಗ್ಗೆ ದೂರುದಾರರ ಬಗ್ಗೆ ವಿಚಾರಿಸಿದಾಗ ತಾನು ತನ್ನ ಶರ್ಟ್ ಜೇಬಿನಿಂದ ಲಂಚದ ಹಣ ರೂ. 40,000/- ಗಳನ್ನು ಶ್ರೀ ಪ್ರತೀಕ ಬೇವಿನಕಟ್ಟಿ ಇವರಿಗೆ ಕೊಟ್ಟಾಗ ಅವರು ಲಂಚದ ಹಣವನ್ನು ತಮ್ಮ ಎಡಗೈನಿಂದ ಪಡೆದು ಹಣವನ್ನು ಏಣಿಸಿಕೊಳ್ಳದೆ ತಮ್ಮ ಕ್ಯಾಶ್ ಡ್ರಾದಲ್ಲಿ ಇಟ್ಟುಕೊಂಡಿರುತ್ತಾರೆಂದು ತಿಳಿಸಿರುತ್ತಾರೆ.

15. ವಿಷಯ ತಿಳಿದ ಶ್ರೀ ವಾಸುದೇವ ಡಿಎಸ್‌ಪಿ ಎಸಿಬಿ ಗದಗರವರು ಘಟನಾ ಸ್ಥಳಕ್ಕೆ ಬಂದು ತನಿಖಾಧಿಕಾರಿಯವರಿಂದ ಮಾಹಿತಿ ಪಡೆದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಸೂಚಿಸಿದಂತೆ ಶ್ರೀ ಪ್ರತೀಕ ಬೇವಿನಕಟ್ಟಿ ಇವರು ಲಂಚದ ಹಣ ಇಟ್ಟಿದ್ದ ಡ್ರಾ ತೆರೆದು ತೋರಿಸಿದ್ದು, ಡ್ರಾದಲ್ಲಿ ಮುಂದೆ ಎರಡು ಕೌಂಟರ್ ಹಿಂದೆ ಒಂದು ಕೌಂಟರ್ ಇದ್ದು, ಹಿಂದಿನ ಭಾಗದ ಎಡಗಡೆಯಲ್ಲಿ ಇಟ್ಟಿದ್ದ ಪ್ಲಾಸ್ಟಿಕ ಡಬ್ಬಿಯ ಪಕ್ಕದಲ್ಲಿ ಲಂಚದ ಹಣವನ್ನು ಇಟ್ಟಿರುವುದು ಕಂಡು ಬಂದಿರುತ್ತದೆ. ಪಂಚ-1ರವರು ಶ್ರೀ ಪ್ರತೀಕ ಬೇವಿನಕಟ್ಟಿ ಇವರ ಕೊಲ್ಡ್ರಿಂಕ್ಸ್ ಅಂಗಡಿಯ ಕೌಂಟರ್‌ನಲ್ಲಿರುವ ಕ್ಯಾಶ್ ಡ್ರಾನಿಂದ ಲಂಚದ ಹಣವನ್ನು ತೆಗೆದು ಹಾಜರಪಡಿಸಿ ಪರಿಶೀಲಿಸಲಾಗಿ ಅವು ರೂ.2,000/- ಮುಖಬೆಲೆಯ 15 ನೋಟುಗಳನ್ನು ಹಾಗೂ ರೂ.500/- ಮುಖಬೆಲೆಯ 20 ನೋಟುಗಳಿದ್ದು, ಪಂಚ-1 ರವರು ಸದರಿ ನೋಟುಗಳ ನಂಬರ್‌ಗಳನ್ನು ಓದಿ ಹೇಳಿದಂತೆ ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ಹಾಳೆಯಲ್ಲಿ ಬರೆದುಕೊಂಡಿದ್ದ ನೋಟ್ ನಂಬರ್‌ಗಳನ್ನು ಪಂಚ-2 ರವರು ಪರಿಶೀಲಿಸಲಾಗಿ ಸದರಿ ನೋಟ್ ನಂಬರಗಳು ತಾಳೆಯಾಗಿರುತ್ತದೆ. ತನಿಖಾಧಿಕಾರಿಯವರು ಸದರಿ ನೋಟುಗಳನ್ನು ಒಂದು ಖಾಲಿ ಕವರಿನಲ್ಲಿಟ್ಟು ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರ ಸೂಚನೆಯಂತೆ ಪಂಚ-1ರವರು ತಯಾರಿಸಿಟ್ಟ ಸೋಡಿಯಂ ಕಾರ್ಬೋನೇಟ್ ದ್ರಾವಣದ ಬಟ್ಟಲುಗಳಲ್ಲಿ ತಮ್ಮ ಎರಡು ಕೈಗಳನ್ನು ಪ್ರತ್ಯೇಕವಾಗಿ ಅದ್ದಿ ತೊಳೆದುಕೊಂಡಾಗ ಎರಡು ಬಟ್ಟಲುಗಳಲ್ಲಿಯ ದ್ರಾವಣವು ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಗಿರುತ್ತದೆ. ನಂತರ ದೂರುದಾರರು ತಮ್ಮ ಎರಡು ಕೈಗಳನ್ನು ತಯಾರಿಸಿಟ್ಟ ಸೋಡಿಯಂ ಕಾರ್ಬೋನೇಟ್ ದ್ರಾವಣದ ಬಟ್ಟಲುಗಳಲ್ಲಿ ಅದ್ದಿ ತೊಳೆಯಿಸಿದಾಗ ಎರಡು ಕೈಗಳನ್ನು ತೊಳೆದುಕೊಂಡ ಬಟ್ಟಲುಗಳಲ್ಲಿಯ ದ್ರಾವಣದ ಬಣ್ಣ ಬದಲಾಗಿರುವುದಿಲ್ಲ. ದೂರುದಾರರು ತಮ್ಮ ಕೈಗಳನ್ನು ತೊಳೆದ ದ್ರಾವಣಗಳ ಬಣ್ಣ ಬದಲಾವಣೆಯಾಗದಿರುವ ಬಗ್ಗೆ ತನಿಖಾಧಿಕಾರಿಯವರು ದೂರುದಾರರಿಗೆ ವಿಚಾರಿಸಿದಾಗ ಅವರು ಲಂಚದ ಹಣವನ್ನು ತಮ್ಮ ಜೇಬಿನಿಂದ ತಮ್ಮ ಹೆಬ್ಬೆರಳು ಹಾಗೂ ತೋರುಬೆರಳುನಿಂದ ತೆಗೆದುಕೊಟ್ಟಿದ್ದು, ಹಣವನ್ನು ಪ್ರತೀಕ ಇವರ ಮುಂದೆ ಎಣಿಸಿಕೊಟ್ಟಿರುವುದಿಲ್ಲ ಎಂದು ಹೇಳಿರುತ್ತಾರೆ. ಕ್ಯಾಶ್ ಡ್ರಾದಲ್ಲಿ ಲಂಚದ ಹಣ ಇಟ್ಟಿದ್ದ

ಭಾಗವನ್ನು ಕಾಟನ್‌ದಿಂದ ಒರೆಯಿಸಿ, ಆ ಕಾಟನ್‌ನ್ನು ತಯಾರಿಸಿಟ್ಟ ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದ ಬಟ್ಟಲಿನಲ್ಲಿ ಅದ್ದಿಸಿ ತೊಳೆಸಿದಾಗ ದ್ರಾವಣದ ಬಣ್ಣ ತಿಳಿ ಗುಲಾಬಿ ಬಣ್ಣಕ್ಕೆ ಬದಲಾಗಿರುತ್ತದೆ. ಸದರಿ ದ್ರಾವಣ ಹಾಗೂ ಕಾಟನ್‌ನ್ನು ತನಿಖಾಧಿಕಾರಿಯವರು ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಫಕ್ಕೀರಪ್ಪ ಪೂಜಾರ ಹಾಗೂ ಪ್ರತೀಕ ಬೇವಿನಕಟ್ಟಿ ಇವರಿಗೆ ಹತ್ತಿರದಲ್ಲಿಯೇ ಇದ್ದ ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಕರೆದುಕೊಂಡು ಬಂದು ಸದರಿ ಕಛೇರಿಯ ಜಿಲ್ಲಾ ವ್ಯವಸ್ಥಾಪಕರಾದ ಎದುರುದಾರರಿಗೆ ತನಿಖಾಧಿಕಾರಿಯವರು ತಮ್ಮ ಪಂಚರ ಹಾಗೂ ತಮ್ಮ ಸಿಬ್ಬಂದಿಯವರ ಪರಿಚಯ ಮಾಡಿಸಿ ದೂರುದಾರರು ನೀಡಿದ ದೂರಿನಂತೆ ಎಸಿಬಿ ಗದಗನಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಾಗಿರುವ ಬಗ್ಗೆ ತಿಳಿಸಿ ಫಕ್ಕೀರಪ್ಪ ಪೂಜಾರ ಹಾಗೂ ಪ್ರತೀಕ ಬೇವಿನಕಟ್ಟಿ ಇವರಿಗೆ ತೋರಿಸಿ ದೂರುದಾರರು ಇವರಿಗೆ ಎದುರುದಾರರು ಬೇಡಿಕೆಯಿಟ್ಟ ಲಂಚದ ಹಣ ರೂ. 40,000/- ಗಳನ್ನು ಎದುರುದಾರರ ಕಛೇರಿಯ ಡ್ರೈವರ ಆದ ಫಕ್ಕೀರಪ್ಪ ಪೂಜಾರ ಇವರು ಹೇಳಿದಂತೆ ಪ್ರತೀಕ ಬೇವಿನಕಟ್ಟಿ ಇವರು ಪಡೆದುಕೊಂಡಿರುತ್ತಾರೆಂದು ತಿಳಿಸಿ ಅವರ ಪರಿಚಯವಿರುವ ಬಗ್ಗೆ ಎದುರುದಾರರಿಗೆ ಕೇಳಿದಾಗ ಎದುರುದಾರರು ಪರಿಚಯವಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರಿಗೆ ಅವರ ಹೆಸರು ವಿಳಾಸ ಕೇಳಿ ತಿಳಿದುಕೊಂಡ ನಂತರ ಎದುರುದಾರರು ಮಿಟಿಂಗಿಗೆ ಹಾಜರಾಗಿರುವ ಬಗ್ಗೆ ವಿಚಾರಿಸಿದಾಗ ಎದುರುದಾರರು ಅವರಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮಿಟಿಂಗ ಇದ್ದು, ಈಗ ಅಷ್ಟೆ ಮುಗಿದಿರುತ್ತದೆಂದು ತಿಳಿಸಿರುತ್ತಾರೆ. ಆಗ ತನಿಖಾಧಿಕಾರಿಯವರು ದೂರುದಾರರಿಗೆ ತಮ್ಮ ದೂರಿನಲ್ಲಿ ಜಿಲ್ಲಾ ವ್ಯವಸ್ಥಾಪಕರ ಹೆಸರು ರುದ್ರೇಶ ಎಂದು ಬರೆಯಿಸಿರುವ ಬಗ್ಗೆ ಕೇಳಿದಾಗ ಅವರು ಅವರ ಕಛೇರಿಯಲ್ಲಿ ಎಲ್ಲರೂ ಹಾಗೇಯೆ ಕರೆಯುತ್ತಿದ್ದರಿಂದ ನಾನು ರುದ್ರೇಶ ಎಂದು ಬರೆಯಿಸಿರುತ್ತೇನೆ. ಈಗ ಅವರ ಹೆಸರು ಹನುಮಂತಪ್ಪ ತಂದೆ ಯಲ್ಲಪ್ಪ ರುದ್ರಾಕ್ಷಿ ಎಂದು ತಿಳಿಯಿತು ಎಂದು ಹೇಳಿರುತ್ತಾರೆ.

16. ತನಿಖಾಧಿಕಾರಿಯವರು ದೂರುದಾರರ ಕೆಲಸಕ್ಕೆ ಸಂಬಂಧಿಸಿದ ಕಡತ ಹಾಜರಪಡಿಸಲು ಸೂಚಿಸಿದಾಗ ಎದುರುದಾರರು ತಮ್ಮ ಕಛೇರಿಯ ಸಿಬ್ಬಂದಿಯಾದ

ಶ್ರೀಮತಿ ಜಯಲಕ್ಷ್ಮೀ ಶೇಷಗಿರಿ, ಬೆರಳಚ್ಚುಗಾರರು/ಲೆಕ್ಕಸಹಾಯಕರು, ಇವರ ಮೂಲಕ ಒಂದು ಕಡತವನ್ನು ಹಾಜರಪಡಿಸಿದ್ದು, ಸದರಿ ಕಡತವನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಮೊದಲು ಹತ್ತು ಪುಟಗಳ ನೋಟ್ ಶೀಟ್ ಇದ್ದು, ಒಂದನೇ ಪುಟದ ನೋಟಶೀಟ್ ಕ್ರಮ ಸಂ.52, ದಿ:13-11-2020 ರಲ್ಲಿ "ವಿಜಯಲಕ್ಷ್ಮೀ ಮಂಜುನಾಥ ಸಜ್ಜನ ಸಾ॥ ಗದಗ ತಾ: ಗದಗ ಇವರಿಗೆ 20% ರಷ್ಟು ಅನುದಾನ ಅಂದರೆ ರೂ. 12,57,500/- ಗಳನ್ನು ಬಿಡುಗಡೆ ಮಾಡಬೇಕಾಗಿತ್ತು ಕೇಂದ್ರ ಕಛೇರಿಯಿಂದ ಅನುದಾನ ಬಿಡುಗಡೆಯಾಗಿರುತ್ತದೆ. ಪ್ರಯುಕ್ತ ಸದರಿ ಭೂಮಾಲಿಕರಿಗೆ ರೂ.12,57,500/- ಗಳನ್ನು ತಮ್ಮ ಅನುಮೋದನೆಗಾಗಿ ಕಡತ ಮಂಡಿಸಿದೆ" ಎಂದು ನಮೂದಿಸಿದ್ದು, ಈ ನೋಟ್‌ಶೀಟ್‌ನ್ನು ತಮ್ಮ ಕಛೇರಿಯ ಸಿಬ್ಬಂದಿಯಾದ ಶ್ರೀಮತಿ ಜಯಲಕ್ಷ್ಮೀ ಶೇಷಗಿರಿ ಇವರು ಬರೆದಿರುತ್ತಾರೆಂದು ಎದುರುದಾರರು ತಿಳಿಸಿರುತ್ತಾರೆ.

17. ಸದರಿ ನೋಟ್‌ಶೀಟ್ ಕೆಳಗೆ ಪೆನ್ಸಿಲ್‌ದಿಂದ "ಅನುದಾನ ಬಿಡುಗಡೆ ಆದೇಶದ ಮೂಲ ಪ್ರತಿ ಬಂದ ನಂತರ ಮತ್ತು ಫಲಾನುಭವಿಗಳಿಂದ ಜಮೀನು ಸಾಗುವಳಿಗೆ ಪಡೆದ ಬಗ್ಗೆ ಪತ್ರ ಪಡೆದು ಸಂದಾಯ ಮಾಡಲು ಕಡತ ಮಂಡಿಸಬೇಕು" ಎಂದು ಬರೆದಿದ್ದ ನೋಟನ್ನು ಯಾರು ಬರೆದಿರುತ್ತಾರೆಂದು ತನಿಖಾಧಿಕಾರಿಯವರು ಎದುರುದಾರರಿಗೆ ಕೇಳಿದಾಗ ಎದುರುದಾರರು ತಮ್ಮ ಕಛೇರಿಯ ತಾಲ್ಲೂಕು ಅಭಿವೃದ್ದಿ ಅಧಿಕಾರಿಯಾದ ಶ್ರೀ ವೆಕಂಟೇಶ್ ಹೆಚ್ ದ್ವಾಸಲಕೆರಿ ಇವರು ಬರೆದಿರುತ್ತಾರೆಂದು ತಿಳಿಸಿರುತ್ತಾರೆ.

18. ಆಗಷ್ಟೇ ಕಛೇರಿಗೆ ಬಂದ ಶ್ರೀ ವೆಂಕಟೇಶ ಹೆಚ್ ದ್ವಾಸಲಕೇರಿ ಇವರಿಗೆ ತನಿಖಾಧಿಕಾರಿಯವರು ವಿಚಾರಿಸಿದಾಗ ಅವರು ಭೂಮಾಲೀಕರು ಫಲಾನುಭವಿಗಳಿಗೆ ಭೂಮಿ ಖರೀದಿ ಕೊಟ್ಟು ನೊಂದಣಿ ಮಾಡಿಸಿದ ನಂತರವು ಸಹ ಕೆಲವು ಜಮೀನು ಮಾಲೀಕರು ಜಮೀನು ಸಾಗುವಳಿ ಮಾಡುತ್ತಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಫಲಾನುಭವಿಗಳು ತಮಗೆ ಹಂಚಿಕೆಯಾದ ಜಮೀನುಗಳ ಉಳುಮೆ ಮಾಡುತ್ತಿರುವ ಬಗ್ಗೆ ಖಾತ್ರಿ ಪಡೆಸಿಕೊಂಡು, ಸಾಗುವಳಿ ಪತ್ರಗಳನ್ನು ಸಂಬಂಧಿಸಿದ ಫಲಾನುಭವಿಗಳಿಂದ ಪಡೆದುಕೊಳ್ಳುವುದಕ್ಕಾಗಿ ಬರೆದಿದ್ದು, ಈ ನೋಟನ್ನು ಪೆನ್ಸಿಲ್‌ದಿಂದ ಬರೆದಿದ್ದು, ಅದಕ್ಕೆ ಸಹಿ ಮಾಡಿರುವುದಿಲ್ಲ. ಗದಗ ತಾಲ್ಲೂಕು ಸೇರಿದಂತೆ ಹೆಚ್ಚುವರಿ ಪ್ರಭಾರದಲ್ಲಿ ನರಗುಂದ

ಹಾಗೂ ರೋಣ ತಾಲ್ಲೂಕಿನ ತಾಲ್ಲೂಕು ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

19. ಭೂ ಒಡೆತನ ಯೋಜನೆಯಡಿಯಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ದೂರುದಾರರ ಪತ್ನಿಯಾದ ಶ್ರೀಮತಿ ವಿಜಯಲಕ್ಷ್ಮಿ ಮಂಜುನಾಥ ಸಜ್ಜನ ಇವರು ಹಿರೇಹಂದಿಗೊಳ ಗ್ರಾಮದ ಹದ್ದಿಯ ರಿ.ಸ.ನಂ. 83/1+2, 13–2 ಎಕರೆ ಹಾಗೂ 88/1ಎ+1ಬಿ+1ಸಿ, 6–30 ಎಕರೆ, ಒಟ್ಟು 20–15 ಎಕರೆ ಜಮೀನನ್ನು ಮಾರಾಟ ಮಾಡಿದ ಬಗ್ಗೆ ಡಾ॥ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಹಂತ ಹಂತವಾಗಿ ರೂ. 20 ಲಕ್ಷ, ರೂ. 30,30,000/– ರೂ. 31,20,000/–, ರೂ, 7,80,000/– ಗಳನ್ನು ಹಂತ ಹಂತವಾಗಿ ಬಿಡುಗಡೆ ಮಾಡಿದ ಬಗ್ಗೆ ನೋಟ್‌ಶೀಟ್‌ಗಳಲ್ಲಿ ನಮೂದಿಸಲಾಗಿರುತ್ತದೆ.

20. ಸದರಿ ಕಡತದಲ್ಲಿಯ ಇನ್ನುಳಿದ ದಾಖಲಾತಿಗಳನ್ನು ಪರಿಶೀಲಿಸಿದಾಗ ಚೆಕ್ ನಂ. 507186 ದಿ: 03–11–2020 ರಲ್ಲಿ ರೂ. 12,57,500/– ಹಣ ಬಿಡುಗಡೆ ಮಾಡಿದ ಬಗ್ಗೆ ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು. ಇವರ ಪತ್ರ ದಿ: 06–11–2020 ನೇದರ ಜೆರಾಕ್ಸ್ ಪ್ರತಿಯಾಗಿದ್ದು, ಅದನ್ನು ದೂರುದಾರರು ತಾವೇ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ನಂತರದ ದಾಖಲಾತಿಗಳಲ್ಲಿ ಹಂತ ಹಂತವಾಗಿ ಭೂಮಾಲೀಕರಿಗೆ ಹಣ ಬಿಡುಗಡೆಯಾದ ಬಗ್ಗೆ ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರಗಳು, ಭೂ ಮಾಲೀಕರಾದ ಶ್ರೀಮತಿ. ವಿಜಯಲಕ್ಷ್ಮೀ ಸಜ್ಜನ ಇವರು ಭೂ ಒಡೆತನ ಯೋಜನೆಯಡಿಯಲ್ಲಿ ತಮ್ಮ ಜಮೀನುಗಳನ್ನು ಮಾರಾಟಕ್ಕೆ ಕೊಡಲು ಸ್ಟ್ಯಾಂಪ್ ಪೇಪರದಲ್ಲಿ ಬರೆದುಕೊಟ್ಟ ಒಪ್ಪಿಗೆ ಪತ್ರ ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಗದಗದಿಂದ ಭೂ ಒಡೆತನ ಯೋಜನೆಯಡಿಯಲ್ಲಿ ಆಯ್ಕೆಯಾದ 6 ಜನರ ಫಲಾನುಭವಿಗಳ ಪಟ್ಟಿ ಸದರಿ 6 ಜನಗಳಿಗೆ ಭೂಮಿ ಖರೀದಿ ಕೊಟ್ಟ ಬಗ್ಗೆ ಖರೀದಿ ದಸ್ತಾವೇಜುಗಳು ಹಾಗೂ ಖರೀದಿಗೆ ಸಂಬಂಧಿಸಿದ ದಾಖಲಾತಿಗಳು, ಪ.ಜಾತಿ/ಪ.ವರ್ಗಗಳ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿ ಕೋಶದಿಂದ ನಾಲ್ಕು ಜನ ಫಲಾನುಭವಿಗಳಿಗೆ ಭೂಒಡೆತನ ಯೋಜನೆಯಡಿಯಲ್ಲಿ ಜಮೀನು ಮಂಜೂರು ಮಾಡಿದ

ಬಗ್ಗೆ ಮಂಜೂರಾತಿ ಆದೇಶ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲಾತಿಗಳು ಸದರಿ ನಾಲ್ಕು ಜನರಿಗೆ ಭೂಮಿ ಖರೀದಿ ಕೊಟ್ಟ ಬಗ್ಗೆ ಖರೀದಿ ದಸ್ತಾವೇಜು ಹಾಗೂ ಖರೀದಿಗೆ ಸಂಬಂಧಿಸಿದ ದಾಖಲಾತಿಗಳಾಗಿರುತ್ತವೆ. ಸದರಿ ದಾಖಲಾತಿಗಳಿಗೆ ನೋಟಶೀಟ್ ಸೇರಿದಂತೆ 1 ರಿಂದ 157 ರವರೆಗೆ ಕ್ರಮ ಸಂಖ್ಯೆ ಹಾಕಿಸಿ ಅವುಗಳನ್ನು ಜೆರಾಕ್ಸ್ ಮಾಡಿಸಿ ದೃಢಿಕರಿಸಿ ಕೊಡಲು ತನಿಖಾಧಿಕಾರಿಯವರು ತಾಲ್ಲೂಕು ಅಭಿವೃದ್ಧಿ ಅಧಿಕಾರಿಯವರಿಗೆ ಸೂಚಿಸಿರುತ್ತಾರೆ.

21. ತನಿಖಾಧಿಕಾರಿಯವರು ದೂರುದಾರರ ಬಳಿ ಇದ್ದ ವಾಯ್ಸ್ ರೆಕಾರ್ಡ್‌ರನ್ನು ಹಾಜರಪಡಿಸಿಕೊಂಡು, ಲ್ಯಾಪಟಾಪ್‌ಗೆ ಕನೆಕ್ಟ್ ಮಾಡಿಸಿ, ಅದರಲ್ಲಿ ದಾಖಲಾದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ ಅದರಲ್ಲಿ ಮೊದಲು ದೂರುದಾರರು ಡ್ರೈವರ್ ಫಕ್ಕೀರಪ್ಪರವರೊಂದಿಗೆ ಮಾತನಾಡಿದ ಸಂಭಾಷಣೆ ಕೇಳಿ ಬಂದಿದ್ದು ನಂತರ ಬೇವಿನಕಟ್ಟಿ ಕೊಲ್ಡ್ರಿಂಕ್ಸ್ ಅಂಗಡಿಯಲ್ಲಿ ಸೇರಿದ್ದ ಗ್ರಾಹಕರ ಸಂಭಾಷಣೆಯಲ್ಲಿ ದೂರುದಾರರ, ಡ್ರೈವರ್ ಫಕ್ಕೀರಪ್ಪ ಹಾಗೂ ಪ್ರತೀಕ ಬೇವಿನಕಟ್ಟಿ ಇವರ ಮಧ್ಯೆ ಜರುಗಿಸಿದ ಸಂಭಾಷಣೆಯು ಕೇಳಿ ಬಂದಿರುವುದಿಲ್ಲ. ಸದರಿ ಸಂಭಾಷಣೆಯಲ್ಲಿ ಸ್ಪಷ್ಟವಾಗಿ ಕೇಳಿ ಬಂದ ಮಾತುಗಳನ್ನು ಟ್ರ್ಯಾಪ್ ಪಂಚನಾಮೆಯಲ್ಲಿ ನಮೂದಿಸಿ ದೂರುದಾರರಿಗೆ ಕೇಳಿದಾಗ ಅವರು ತಾನು ಡ್ರೈವರ್ ಫಕ್ಕೀರಪ್ಪ ಇವರೊಂದಿಗೆ ಮಾತನಾಡುತ್ತಾ ಅವರು ಹೇಳಿದಂತೆ ಬೇವಿನಕಟ್ಟಿ ರವರ ಕೊಲ್ಡ್ರಿಂಕ್ಸ್ ಅಂಗಡಿಗೆ ಹೋಗಿದ್ದು, ಅಲ್ಲಿ ಹಲವು ಜನ ಗ್ರಾಹಕರು ಕುಳಿತು ಏರು ಧ್ವನಿಯಲ್ಲಿ ಮಾತನಾಡುತ್ತಿದ್ದರು. ತಾನು ವಾಯ್ಸ್ ರೆಕಾರ್ಡ್‌ರನ್ನು ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿದ್ದರಿಂದ ಕುಳಿತು ಮಾತನಾಡುತ್ತಿದ್ದ ಗ್ರಾಹಕರ ಧ್ವನಿಯು ರೆಕಾರ್ಡ್ ಆಗಿದ್ದು, ಅದರಲ್ಲಿ ತಾನು, ಡ್ರೈವರ್ ಫಕ್ಕೀರಪ್ಪ ಹಾಗೂ ಪ್ರತೀಕ ಇವರು ಮಾತನಾಡಿರುವುದು ಗ್ರಾಹಕರ ಏರು ಧ್ವನಿಯಲ್ಲಿ ಕೇಳಿ ಬಂದಿರುವುದಿಲ್ಲ. ಆದರೆ, ಡ್ರೈವರ್ ಫಕ್ಕೀರಪ್ಪ ಪೂಜಾರ ಇವರು ಹೇಳಿದಂತೆ ಕೊಲ್ಡ್ರಿಂಕ್ಸ್ ಅಂಗಡಿ ನಡೆಸುವ ಪ್ರತೀಕ ಬೇವಿನಕಟ್ಟಿ ಇವರ ಕಡೆಗೆ ಲಂಚದ ಹಣ ಕೊಟ್ಟಾಗ ಅವರು ಆ ಹಣವನ್ನು ತಮ್ಮ ಎಡಗೈನಿಂದ ಪಡೆದು, ತಮ್ಮ ಕೊಲ್ಡ್ರಿಂಕ್ಸ್ ಸೆಂಟರ್‌ನ ಟೇಬಲ್‌ದಲ್ಲಿ ಕ್ಯಾಶ್ ಡ್ರಾದಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ತಾನು ಫಕ್ಕೀರಪ್ಪ ಪೂಜಾರ ಇವರೊಂದಿಗೆ ಕೊಲ್ಡ್ರಿಂಕ್ಸ್ ಅಂಗಡಿಯಿಂದ ಹೊರಗೆ ಬಂದು

ಕಾಂಪ್ಲೆಕ್ಸ್‌ನ ಮೆಟ್ಟಲಿನ ಹತ್ತಿರ ನಿಂತು ಹಣ ಕೊಟ್ಟ ಬಗ್ಗೆ ಸನ್ನೆ ಮಾಡಿರುತ್ತೇನೆಂದು ಹೇಳಿರುತ್ತಾರೆ. ಸದರಿ ಸಂಭಾಷಣೆಯ ಭಾಗವನ್ನು ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರಿಂದ ಲ್ಯಾಪಟಾಪ್ ಮೂಲಕ ಸಿಡಿಗೆ ಕಾಪಿ ಮಾಡಿಸಿ ಮುಂದಿನ ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ.

22. ನಂತರ ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಎದುರುದಾರರಿಗೆ, ವಾಹನ ಚಾಲಕ ಶ್ರೀ ಫಕ್ಕೀರಪ್ಪ ಮಲ್ಲಪ್ಪ ಪೂಜಾರ ಹಾಗೂ ಪ್ರತೀಕ ಬೇವಿನಕಟ್ಟಿ ಇವರಿಗೆ ದೂರುದಾರರಿಂದ ಲಂಚದ ಹಣ ಪಡೆದ ಬಗ್ಗೆ ವಿವರಣೆ ಬರೆದುಕೊಡಲು ತಿಳಿಸಿದಂತೆ ಮೊದಲನೆದಾಗಿ ಎದುರುದಾರರು ತಮ್ಮ ಲಿಖಿತ ವಿವರಣೆಯನ್ನು ಬರೆದುಕೊಟ್ಟಿದ್ದು, ಅದರಲ್ಲಿ "ನಾನು ಶ್ರೀ ಹೆಚ್.ವೈ. ರುದ್ರಾಕ್ಷಿ, ಜಿಲ್ಲಾ ವ್ಯವಸ್ಥಾಪಕರು, ಡಾ॥ ಬಿ.ಆರ್. ಅಂಬೇಡ್ಕರ ಅಭಿವೃದ್ಧಿ ನಿಗಮ ಗದಗ, ಭೂ ಒಡೆತನ ಯೋಜನೆಯಡಿ ಶ್ರೀಮತಿ ವಿಜಯಲಕ್ಷ್ಮೀ ಗಂಡ ಮಂಜುನಾಥ ಸಜ್ಜನ ಸಾ॥ ಗದಗ ತಾಲ್ಲೂಕಾ ಗದಗ ಇವರ ಜಮೀನಿಗೆ ಸಂಬಂಧಿಸಿದಂತೆ ಹಣಕಾಸಿನ ವ್ಯವಹಾರ ಜಮೀನಿಗೆ ಖರೀದಿಸಿದಂತೆ ಹಣ ಬಿಡುಗಡೆ ಮಾಡಬೇಕಾಗಿರುತ್ತದೆ, ಹಣ ಬಿಡುಗಡೆ ಕ್ರಮ ಜರುಗಿಸಲಾಗುವುದು. ತಮ್ಮ ಅವಗಾಹನೆಗಾಗಿ ತರಲಾಗಿದೆ. ವಂದನೆಗಳೊಂದಿಗೆ" ಎಂದು ಬರೆದುಕೊಟ್ಟಿರುತ್ತಾರೆ.

23. ಶ್ರೀ ಫಕ್ಕೀರಪ್ಪ ಮಲ್ಲಪ್ಪ ಪೂಜಾರ, ವಾಹನ ಚಾಲಕ, ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಗದಗರವರು ತಮ್ಮ ವಿವರಣೆಯಲ್ಲಿ "ಡಿ.ಎಂ ರುದ್ರಾಕ್ಷಿ ಸರ್ ಮತ್ತು ಮಂಜುನಾಥ ಸಜ್ಜನರು 21.11.2020 ರಂದು ಬಂದು ಡಿ.ಎಂ ಸರ್ ಮತ್ತು ಸಜ್ಜನರ ಇಬ್ಬರು ಒಟ್ಟು ಏನ್ ಏನ್ ಮಾತಾಡಿದ್ದಾರೆ ನನಗೆ ಗೊತ್ತಿಲ್ಲ. ಡಿ.ಎಂ ಸರ್ ಹೇಳಿದರು ಸೋಮವಾರ ಬಂದು ದುಡ್ಡು ಕೊಡತಾರೆ ಇಸಕೊ ಅಂದ್ರು, ಅದಕ್ಕೆ ನಾನು ಸರಿ ಅಂದೇ. ಸರ್ ಸೋಮವಾರ ಬಂದು ದುಡ್ಡು ಕೊಡೋಕೆ ಬಂದ್ರು, ನಾವಲ್ಲೆ ಸರ್ ಅಂದೆ. ಪ್ರತೀಕ್ ಬೇವಿನಕಟ್ಟಿ ಕಡೆ ಕೊಡು ಅಂದೇ. ಅಷ್ಟೇ ಸರ್, ಇದರಲ್ಲಿ ನಂದು ಯಾವುದೇ ತರಹ ಸಂಬಂಧ ಇರುವುದಿಲ್ಲ." ಎಂದು ಬರೆದುಕೊಟ್ಟಿರುತ್ತಾರೆ.

24. ಶ್ರೀ ಪ್ರತೀಕ ವಿನೋದ ಬೇವಿನಕಟ್ಟಿ ರವರು ತಮ್ಮ ವಿವರಣೆಯನ್ನು ಬರೆದುಕೊಟ್ಟಿದ್ದು, ಅದರಲ್ಲಿ "ನಾನು ಪ್ರತೀಕ ವಿ ಬೇವಿನಕಟ್ಟಿ, ಫಕ್ಕೀರಪ್ಪ ಪೂಜಾರ ಹೇಳಿದ್ದಕ್ಕೆ ಮಂಜುನಾಥ ಸಜ್ಜನ ಅವರ ಹತ್ತಿರ ದುಡ್ಡು ತೆಗೆದುಕೊಂಡೆ ನನ್ನ ಹತ್ತಿರ ಇಟ್ಟುಕೊಂಡೆ. ನನ್ನ ತಪ್ಪು ಆಯಿತು" ಎಂದು ಬರೆದುಕೊಟ್ಟಿರುತ್ತಾರೆ.

25. ಈ ಮೂರು ಜನರ ವಿವರಣೆ ಬಗ್ಗೆ ತನಿಖಾಧಿಕಾರಿಯವರು ದೂರುದಾರರನ್ನು ವಿಚಾರಿಸಿದಾಗ ಅವರು ಶ್ರೀ ಫಕ್ಕೀರಪ್ಪ ಮಲ್ಲಪ್ಪ ಪೂಜಾರ ಹಾಗೂ ಪ್ರತೀಕ ಬೇವಿನಕಟ್ಟಿ ಇವರ ವಿವರಣೆ ಸಮಂಜಸವಾಗಿದ್ದು, ಶ್ರೀ ಹೆಚ್.ವೈ. ರುದ್ರಾಕ್ಷಿ, ಜಿಲ್ಲಾ ವ್ಯವಸ್ಥಾಪಕರು, ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಗದಗ ಇವರು ತಾವು ಹಣಕ್ಕಾಗಿ ಬೇಡಿಕೆಯಿಟ್ಟ ಬಗ್ಗೆ ತಮ್ಮ ವಿವರಣೆಯಲ್ಲಿ ತಿಳಿಸಿಲ್ಲ, ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟ ಸಂಭಾಷಣೆಯನ್ನು ಪಂಚರು ಕೇಳಿದ್ದು, ಶ್ರೀ ಹೆಚ್.ವೈ ರುದ್ರಾಕ್ಷಿ ಇವರ ವಿವರಣೆ ಸಮರ್ಪಕವಾಗಿಲ್ಲವೆಂದು ತಿಳಿಸಿರುತ್ತಾರೆ.

26. ತನಿಖಾಧಿಕಾರಿಯವರು 3 ಜನ ವಿವರಣೆ ಬಗ್ಗೆ ಪಂಚರಿಗೆ ಕೇಳಿದಾಗ ಅವರು ಶ್ರೀ ಹೆಚ್.ವೈ ರುದ್ರಾಕ್ಷಿ ಇವರು ಚೆಕ್ ಮೂಲಕ ಬಾಕಿ ಹಣವನ್ನು ಬ್ಯಾಂಕಿಗೆ ಜಮಾ ಮಾಡಲು ರೂ.40,000/- ಕೊಡುವಂತೆ ಲಂಚದ ಬೇಡಿಕೆಯಿಟ್ಟಿದ್ದ ರೆಕಾರ್ಡ್ ಆದ ಸಂಭಾಷಣೆಯನ್ನು ಪಂಚರು ಕೇಳಿದ್ದು, ಅವರು ಸೂಚಿಸಿದಂತೆ ಡ್ರೈವರ್ ಫಕ್ಕೀರಪ್ಪ ತಾನು ಹಣ ಪಡೆಯದೇ ಪ್ರತೀಕ ಇವರ ಕಡೆಗೆ ಕೊಡಿಸಿದ್ದಾನೆ. ದೂರುದಾರರು ನೀಡಿದ ಅಭಿಪ್ರಾಯ ಸರಿಯಿರುತ್ತದೆಂದು ತಿಳಿಸಿರುತ್ತಾರೆ.

27. ನಂತರ ತನಿಖಾಧಿಕಾರಿಯವರು ತಾಲ್ಲೂಕು ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೆಂಕಟೇಶ ಹೆಚ್ ದ್ವಾಸಲ್‌ಕೆರೆ ಇವರಿಗೆ ಹಾಜರಪಡಿಸಿಕೊಂಡು ಶ್ರೀ ಹೆಚ್ ವೈ ರುದ್ರಾಕ್ಷಿ ಇವರ ಲಂಚದ ಬೇಡಿಕೆಯ ಆಡಿಯೋ ಹಾಗೂ ಲಂಚದ ಹಣ ಪಡೆಯುವಾಗ ಜರೂಗಿದ ಆಡಿಯೋ ಸಂಭಾಷಣೆಯನ್ನು ಕೇಳಿ ಅವರ ಧ್ವನಿಯನ್ನು ಗುರುತಿಸಲು ಕೋರಿದಂತೆ ಅವರು ಒಪ್ಪಿಕೊಂಡಾಗ ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರಿಂದ ಲ್ಯಾಪಟಾಪ್ ಮೂಲಕ ರೆಕಾರ್ಡ್ ಆದ ಎರಡು ಸಂಭಾಷಣೆಗಳನ್ನು ಆನ್ ಮಾಡಿಸಿ

ಇಯರ್ ಪೋನ್ ಮೂಲಕ ಶ್ರೀ ವೆಂಕಟೇಶ್ ಹೆಚ್ ದ್ವಾಸಲ್‌ಕೆರೆ ಇವರಿಗೆ ಕೇಳಿಸಿದ್ದು, ಅವರು ಆ ಸಂಭಾಷಣೆಯನ್ನು ಆಲಿಸಿ ಲಂಚದ ಬೇಡಿಕೆಯ ಆಡಿಯೋದಲ್ಲಿರುವ ಶ್ರೀ ಹೆಚ್ ವೈ ರುದ್ರಾಕ್ಷಿ ಇವರ ಧ್ವನಿಯನ್ನು ಗುರುತಿಸಿದ್ದು, ಲಂಚದ ಹಣ ಕೊಡುವ ಸಮಯದಲ್ಲಿ ರೆಕಾರ್ಡ್ ಸಂಭಾಷಣೆಯಲ್ಲಿ ತಮ್ಮ ಕಛೇರಿಯ ಡ್ರೈವರ್ ಫಕ್ಕೀರಪ್ಪ ಇವರ ಧ್ವನಿಯನ್ನು ಸಹ ಗುರುತಿಸಿರುತ್ತಾರೆ.

28. ತನಿಖಾಧಿಕಾರಿಯವರು ಈ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ದೂರುದಾರರ ಹಾಗೂ ಎದುರುದಾರರ, ಫಕ್ಕೀರಪ್ಪ ಇವರ ಮಾದರಿ ಧ್ವನಿಗಳನ್ನು ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಸಿಡಿಗಳಲ್ಲಿ ಅಳವಡಿಸಿ ಪರೀಕ್ಷೆಗೆ ಕಳುಹಿಸಿ ವರದಿ ಪಡೆಯಬೇಕಾಗಿದೆ ಎಂದು ತಿಳಿಸಿದಾಗ ದೂರುದಾರರು ಹಾಗೂ ಎದುರುದಾರರು ಒಪ್ಪಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರ ಮೂಲಕ ದೂರುದಾರರ ಹಾಗೂ ಎದುರುದಾರರ ಮತ್ತು ಫಕ್ಕೀರಪ್ಪ ಇವರು ಮಾತನಾಡಿದ ಕೆಲವು ವಾಕ್ಯಗಳ ಸ್ಕ್ರಿಪ್ಟ್‌ಗಳನ್ನು ತಯಾರಿಸಿ ಮೊದಲು ದೂರುದಾರರಿಗೆ ನೀಡಿ ಸ್ಕ್ರಿಪ್ಟನಲ್ಲಿಯ ವಾಕ್ಯಗಳನ್ನು ಮೂರು ಬಾರಿ ಓದಿಸಿ ವಾಯ್ಸ್ ರೆಕಾರ್ಡ್‌ರ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ರೆಕಾರ್ಡ್ ಮಾಡಿಕೊಂಡ ಭಾಗವನ್ನು ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿಯವರಿಂದ ವಾಯ್ಸ್ ರೆಕಾರ್ಡರ್‌ನಿಂದ ಇನ್ನೊಂದು ಲ್ಯಾಪ್‌ಟಾಪ್ ಮೂಲಕ ಸಿ.ಡಿಯೊಂದಕ್ಕೆ ಕಾಫಿ ಮಾಡಿಕೊಂಡಿರುತ್ತಾರೆ. ನಂತರ ಎದುರುದಾರರಿಗೆ ನೀಡಲಾಗಿದ್ದ ಸ್ಕ್ರಿಪ್ಟ್‌ನಲ್ಲಿಯ ವಾಕ್ಯಗಳನ್ನು ಮೂರು ಬಾರಿ ಓದಿಸಿ ರೆಕಾರ್ಡ್ ಮಾಡಿಕೊಂಡು ರೆಕಾರ್ಡ್ ಮಾಡಿಕೊಂಡ ಭಾಗವನ್ನು ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರಿಂದ ವಾಯ್ಸ್ ರೆಕಾರ್ಡ್‌ರ್‌ನಿಂದ ಲ್ಯಾಪ್‌ಟಾಪ್ ಮೂಲಕ ಸಿ.ಡಿಯೊಂದಕ್ಕೆ ಕಾಪಿ ಮಾಡಿಸಿಕೊಂಡಿರುತ್ತಾರೆ. ನಂತರ ಶ್ರೀ ಫಕ್ಕೀರಪ್ಪ ಮಲ್ಲಪ್ಪ ಪೂಜಾರ ಇವರಿಗೆ ನೀಡಲಾಗಿದ್ದ ಸ್ಕ್ರಿಪ್ಟ್‌ನಲ್ಲಿಯ ವಾಕ್ಯಗಳನ್ನು ಮೂರು ಬಾರಿ ಓದಿಸಿ ರೆಕಾರ್ಡ್ ಮಾಡಿಕೊಂಡು ರೆಕಾರ್ಡ್ ಮಾಡಿಕೊಂಡ ಭಾಗವನ್ನು ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರಿಂದ ವಾಯ್ಸ್ ರೆಕಾರ್ಡರ್‌ನಿಂದ ಲ್ಯಾಪ್‌ಟಾಪ್ ಮೂಲಕ ಸಿ.ಡಿಯೊಂದಕ್ಕೆ ಕಾಪಿ ಮಾಡಿಸಿಕೊಂಡಿರುತ್ತಾರೆ.

29. ತನಿಖಾಧಿಕಾರಿಯವರು ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಶ್ರೀ ವೆಂಕಟೇಶ ಹೆಚ್ ದ್ವಾಸಲಕೆರೆ ಇವರು ದೂರುದಾರರ ಕೆಲಸಕ್ಕೆ ಸಂಬಂಧಿಸಿದ ದಾಖಲಾತಿಗಳ ಕಡತದ 1 ರಿಂದ 157 ವರೆಗಿನ ಹಾಳೆಗಳನ್ನು ಜೆರಾಕ್ಸ್ ಮಾಡಿಸಿ ದೃಢೀಕರಿಸಿ ಹಾಜರಪಡಿಸಿದ್ದನ್ನು ತನಿಖಾಧಿಕಾರಿಗಳು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ 3 ಜನರನ್ನು ತನಿಖಾಧಿಕಾರಿಯವರು ದಸ್ತಗಿರಿ ನಿಯಮಗಳನ್ನು ಪಾಲಿಸಿ ದಸ್ತಗಿರಿ ಮಾಡಿರುತ್ತಾರೆ.

30. ತನಿಖಾಧಿಕಾರಿಯವರ ಸೂಚನೆಯಂತೆ ಅವರ ಸಿಬ್ಬಂದಿಯವರು ಟ್ರ್ಯಾಪ್ ಪಂಚನಾಮೆಯ ಕಾಲಕ್ಕೆ ಡಿಜಿಟಲ್ ಕ್ಯಾಮೆರಾದಿಂದ ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಟ್ರ್ಯಾಪ ಪಂಚನಾಮೆಯನ್ನು ದಿ: 23-11-2020 ರಂದು ಮಧ್ಯಾಹ್ನ 1.20 ಗಂಟೆಯಿಂದ 2.30 ಗಂಟೆಯವರೆಗೆ ಪಂಚರು ಹೇಳಿದಂತೆ ತನಿಖಾಧಿಕಾರಿಯವರು ಉಕ್ತಲೇಖನ ಕೊಟ್ಟು ಲ್ಯಾಪಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

31. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

32. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಫ್ಥಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

33. ಗೌರವಾನ್ವಿತರ ಆದೇಶದ ಮೇರೆಗೆ ಕಂಡಿಕೆಯ 11 ರಂತೆ ಎದುರುದಾರರಿಗೆ ದಿನಾಂಕ 20/10/2022 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು.

34. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 02/12/2022 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ "ದೂರುದಾರರು ತನ್ನ ವಿರುದ್ಧ ಒಂದು ಸುಳ್ಳು ಆಪಾದನೆಯನ್ನು ಗದಗ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)

ಅಧಿಕಾರಿಗಳ ಮುಂದೆ ಒಂದು ಪಿರ್ಯಾದಿಯನ್ನು ಸಲ್ಲಿಸಿ ನನ್ನನ್ನು ಮೋಸದಿಂದ ಸದರಿ ಪ್ರಕರಣದಲ್ಲಿ ನಾನು ಏನೂ ಅಪರಾಧ ಮಾಡದಿದ್ದರೂ ಸಹ ದೂರುದಾರರ ಆಸ್ತಿಗೆ ನಮ್ಮ ನಿಗಮದಿಂದ ಒಟ್ಟು ಮೊತ್ತ ರೂ.89,00,000/- ಗಳು ಮಂಜೂರಾಗಿ ಸದರಿಯವರು 80% ಪಡೆದುಕೊಂಡಿದ್ದು ಇನ್ನೂ ಬಾಕಿ 20% ರೂಪಾಯಿ 12,57,500/- ಸಂದಾಯವಾಗಬೇಕಾಗಿರುವುದು ಬಾಕಿ ಇದ್ದಾಗ ಸದರಿ ದೂರುದಾರರು ದಿ: 03/11/2020 ರಂದು ಕೇಂದ್ರ ಕಛೇರಿಯಿಂದ ಬಾಕಿ ಹಣ ಬಿಡುಗಡೆಯಾಗಿದ್ದು ಅದನ್ನು ತಮಗೆ ಬಿಡುಗಡೆಗೊಳಿಸಬೇಕೆಂದು ಕೇಂದ್ರ ಕಛೇರಿಯ ಹಣ ಬಿಡುಗಡೆಗೊಳಿಸಬೇಕೆಂಬ ಆದೇಶದ ಪ್ರತಿಯ ಜೆರಾಕ್ಸ್ ಎಂದು ಹೇಳಿ ನಮಗೆ ಸಂಪರ್ಕಿಸಿದ್ದು ಆದರೆ ಸದರಿ ಆದೇಶದ ಪ್ರತಿ ಇನ್ನೂ ಗದಗ ಜಿಲ್ಲಾ ಕಛೇರಿಗೆ ತಲುಪದ ಕಾರಣ ಹಣವನ್ನು ಬಿಡುಗಡೆಗೊಳಿಸಲು ಬರುವುದಿಲ್ಲವೆಂದು ದೂರುದಾರನಿಗೆ ತಿಳಿಸಿದ್ದು ಅದರಂತೆ ಸದರಿ ಹಣ ಬಿಡುಗಡೆ ಆದೇಶ ಪತ್ರ ಬಂದ ಕೂಡಲೇ ಹಣ ಬಿಡುಗಡೆಗೊಳಿಸಲಾಗುವುದು ಎಂದು ತಿಳಿ ಹೇಳಿ ಕಳಿಸಲಾಗಿತ್ತು. ಇದರಿಂದ ಕೋಪಗೊಂಡ ಪಿರ್ಯಾದುದಾರನು ನಮ್ಮ ವಿರುದ್ಧ ಸಂಚು ರೂಪಿಸಿ ನಾನು ಎಂದೂ ಅವನಿಂದ ಏನನ್ನೂ ಅಪೇಕ್ಷಿಸದಿದ್ದರೂ ಸಹ ರೂ. 40,000/- ಲಂಚ ಕೊಡುವಂತೆ ಹೇಳಿದ್ದೇನೆ ಎಂದು ಅದನ್ನೂ ಸಹ ಡ್ರೈವರ್ ಕೈಯಲ್ಲಿ ನೀಡುವಂತೆ ಹೇಳಿದ್ದೇನೆಂದು ಆ ರೀತಿ ಸಂಭಾಷಣೆ ಮಾಡಿದ್ದೇನೆಂದು ಸುಳ್ಳು ಸಂಗತಿಗಳನ್ನು ಸೃಷ್ಟಿಸಿ ನನ್ನ ವಿರುದ್ಧ ಗದಗ ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಅಧಿಕಾರಿಗಳಿಗೆ ದೂರು ನೀಡಿದ್ದು" ಇರುತ್ತದೆ ಎಂದು ತಿಳಿಸಿ ತನ್ನ ವಿರುದ್ಧ ಸದರಿ ಆರೋಪಗಳಿಗೆ ಸಂಬಂಧಿಸಿದಂತೆ ಮಾನ್ಯ ಜಿಲ್ಲಾ ವ. ಸತ್ರ ನ್ಯಾಯಾಧೀಶರ ನ್ಯಾಯಾಲಯ ಗದಗ ಇವರಲ್ಲಿ ಪ್ರಕರಣ ಚಾಲ್ತಿಯಲ್ಲಿರುವುದಾಗಿ ತಿಳಿಸಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

35. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು

ತನಿಖಾಧಿಕಾರಿಗಳೂ ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ದೂರುದಾರರಿಗೆ ಲಂಚದ ಹಣವನ್ನು ತಮ್ಮ ವಾಹನ ಚಾಲಕನಾದ ಎಸ್. ಎಂ. ಪೂಜಾರ್ ರವರನ್ನು ತೋರಿಸಿ ಹಣವನ್ನು ಅವರ ಕೈಯಲ್ಲಿ ಕೊಡುವಂತೆ ಹೇಳಿರುತ್ತಾರೆ. ಅದರಂತೆ ದೂರುದಾರರು ಎಸ್. ಎಂ. ಪೂಜಾರ್ ರವರಿಗೆ ಹಣವನ್ನು ಕೊಡಲು ಹೋದಾಗ ಅವರು ದೂರುದಾರರಿಂದ ರೂ.15,000/- ಗಳನ್ನು ನೇರವಾಗಿ ಪಡೆದುಕೊಳ್ಳದೆ ಕೂಲ್‌ಡ್ರಿಂಕ್ಸ್ ಅಂಗಡಿಯ ಪ್ರತೀಕ ವಿನೋದ ಬೇವಿನಕಟ್ಟಿರವರಿಗೆ ಕೊಡುವಂತೆ ದೂರುದಾರರಿಗೆ ತಿಳಿಸಿರುತ್ತಾರೆ. ಅದರಂತೆ ಪ್ರತೀಕ್ ವಿನೋದ ಬೇವಿನಕಟ್ಟಿರವರು ದೂರುದಾರರಿಂದ ರೂ. 15,000/- ಗಳನ್ನು ಎದುರುದಾರರ ಪರವಾಗಿ ಸ್ವೀಕರಿಸಿದ್ದರಿಂದ ಎದುರುದಾರರು ತಮ್ಮ ಕರ್ತವ್ಯದಲ್ಲಿ ನೀತಿ, ನಿಷ್ಠೆಯನ್ನು ಪಾಲಿಸದೆ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021)ರ ನಿಯಮ 3(1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

36. ಈ ಮೇಲ್ಕಂಡ ಅಂಶಗಳಿಂದಾಗಿ ಶ್ರೀ ಹನುಮಂತ ಯಲ್ಲಪ್ಪ ರುದ್ರಾಕ್ಷಿ, ಕಛೇರಿ ಅಧೀಕ್ಷಕರು, ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ದಿ ನಿಗಮ ನಿಯಮಿತ, ಗದಗ ಜಿಲ್ಲೆ ರವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

37. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇ[illegible]

ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6/3/23

**(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)**
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.